# ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗಾಜನೂರು ಅಗ್ರಹಾರ ಶಿವಮೊಗ್ಗ:ತಾ

ತರಗತಿ:4 ವಿಷಯ : ಕನ್ನಡ ಮಾರ್ಗದರ್ಶಕರು:ಶ್ರೀ ಸೋಮಲಿಂಗಪ್ಪ ಜೆ

ಹೆಸರು:

16. ಕಥೆಯನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸು.

ಬಾಲಕ ನರೇಂದ್ರನು ನಾಲ್ಕನೇ ತರಗತಿ ವಿದ್ಯಾರ್ಥಿ. ಅವನು ಇಂದು ಶಾಲೆಯಿಂದ ಬಂದಾಗ ಮುಖ ಸಪ್ಪಗಾಗಿತ್ತು ಮತ್ತು ಕಣ್ಣುಗಳು ಊದಿಕೊಂಡಿದ್ದವು. ತಾಯಿ ಕೋಣೆಯನ್ನು ಸ್ವಚ್ಛಗೊಳಿಸಲು ಬಂದಳು. ನರೇಂದ್ರನು ಅಳುತ್ತಾ ಮಲಗಿದ್ದನು. ಕಪಾಟಿನಲ್ಲಿ ಊಟದ ಡಬ್ಬಿಗೆ ಇರುವೆಗಳು ಸಾಲುಗಟ್ಟಿರುವುದನ್ನು ಕಂಡಳು. "ಯಾಕೆ ಮಗು? ಏನಾಯಿತು? ರೊಟ್ಟಿ ಹಾಗೆ ಇದೆ" ಎಂದು ಕೇಳಿದಳು. ನರೇಂದ್ರ ಅಳುತ್ತಾ ಬಂದು ತಬ್ಬಿಕೊಂಡನು. "ಅಮ್ಮ ಶಾಲೆಗೆ ಹೋಗುವ ದಾರಿಯಲ್ಲಿ ಒಬ್ಬಳು ಅಜ್ಜಿ ಭಿಕ್ಷೆ ಬೇಡುತ್ತಾ ಕುಳಿತಿರುತ್ತಿದ್ದಳು. ಹಲವಾರು ತಿಂಗಳುಗಳಿಂದ ಅವಳಿಗೆ ಒಂದು ರೊಟ್ಟಿ ಕೊಡುತ್ತಿದ್ದೆ. ಅವಳು ನನ್ನನ್ನು ಪ್ರೀತಿಯಿಂದ ಹರಸುತ್ತಿದ್ದಳು". ಇಂದು ಅವಳೇಕೊ ಅಲ್ಲಿ ಕಾಣಲಿಲ್ಲ. ಬಹಳ ಹೊತ್ತು ಕಾದೆನು. ದುಃಖದಿಂದ ಮನೆಗೆ ಬಂದೆನು. ಏನಾಗಿರಬಹುದು? ಎಂದು ಕೇಳಿದನು. ತಾಯಿಯು ಮಗುವೇ ಅಜ್ಜಿ ಊರಿಗೆ ಹೋಗಿರಬಹುದೆಂದು ಸಮಾಧಾನ ಪಡಿಸಿದಳು. ಅಜ್ಜಿಯ ಮೇಲಿನ ಪ್ರೀತಿಯನ್ನು ಕಂಡು ಹರಸಿದಳು. ಆ ಬಾಲಕನೇ ಮುಂದೆ ಸ್ವಾಮಿ ವಿವೇಕಾನಂದ ಎಂದು ವಿಶ್ವವಿಖ್ಯಾತನಾದನು.

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

1. **ಕಪಾಟಿನಲ್ಲಿ ಇರುವೆಗಳು ಏಕೆ ಸಾಲುಗಟ್ಟಿದ್ದವು?**

2. **ಪ್ರತಿ ದಿನ ಅಜ್ಜಿಗೆ ನರೇಂದ್ರ ಏನು ಕೊಡುತ್ತಿದ್ದನು?**

3. **ಪ್ರತಿ ದಿನ ಅಜ್ಜಿಗೆ ರೊಟ್ಟಿಯನ್ನು ಕೊಡುತ್ತಿದ್ದ ಬಾಲಕ ಯಾರು?**

4. **ನಿನ್ನ ಮನೆಯಲ್ಲಿ ನೀನು ಅಜ್ಜ ಅಜ್ಜಿಗೆ ಹೇಗೆ ಸಹಾಯ ಮಾಡುವೆ?**

5. **ನರೇಂದ್ರ ಎಂಬ ಬಾಲಕನು ಮುಂದೆ ಯಾವ ಹೆಸರಿನಿಂದ ಪ್ರಖ್ಯಾತಿ ಪಡೆದನು**?

LIVEWORKSHEETS